ಶ್ರೀ ಬಿ. ಹುಚ್ಚೇಗೌಡರು.—ಆ ಅಧಿಕಾರಿಗಳು ತಮ್ಮ ಶಿಫಾರಸುಗಳನ್ನು ಮಾಡಿದಾಗ ಈ ಗ್ರಾಮಾಭಿವೃದ್ಧಿ ಇರಾಖೆಯೇ ಇರಲಿಲ್ಲವಲ್ಲ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆದರೆ, ಬಾವಿಗಳು, ಗ್ರಾಮಾಂತರ ರಸ್ತೆಗಳು ಇವೆಲ್ಲಾ ಇದ್ದವು.

ಶ್ರೀ ಬಿ. ಹುಚ್ಚೇಗೌಡರು.—ಪಶುಪೋಷಣೆ ಇರಾಖೆಯಲ್ಲಿ 3,12,361 ರೂಪಾಯಿ ಕಡಿಮೆ ಮಾಡಲಾಗಿದೆಯೆಂದು ತಿಳಿಸಿದ್ದೀರಿ, ಇದರಿಂದ ದೇಶಾಭ್ಯುದಯ ಕಾರ್ಯ ಕಡಿಮೆಯಾಗುವುದಿಲ್ಲವೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದು ಅಭಿಪ್ರಾಯ.

Investment on Bhadravathi Iron and Steel Works, its working and management.

*ಪ್ರಶ್ನೆ 212.—ಶ್ರೀ ಜಿ. ವೀರಪ್ಪನವರು (ಚಿತ್ರದುರ್ಗ ಡಿಸ್ಟ್ರಿಕ್ಟ್.)—

ಪ್ರಶ್ನೆ. ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಾಗಿ ಸರ್ಕಾರದವರು ಹಾಕಿರತಕ್ಕ ಒಟ್ಟು ಮೊಬಲಗೆಷ್ಟು ;

(b) ಈ ಕಾರ್ಖಾನೆ ಲಾಭದಾಯಕವಾಗಿ ನಡೆಯುತ್ತಿದೆಯೆ ; ಹಾಗೆ ನಡೆಯುತ್ತಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಬಂದಿರುವ ನಿವ್ವಳ ಲಾಭಗಳೇನು ;

(c) ಕಾರ್ಖಾನೆಯ ಆಡಳಿತದ ವಿಷಯದಲ್ಲಿ ಸರ್ಕಾರದವರಿಗಿರತಕ್ಕ ಅಧಿಕಾರಗಳು ಮತ್ತು ಹೆಚ್ಚೂ ಏನು ; ಒಟ್ಟು ಉತ್ಪತ್ತಿಯಾಗುವ ಕಬ್ಬಿಣ ಮತ್ತು ಉಕ್ಕಿನ ಮೇಲೆ ಸರ್ಕಾರದವರ ಅಧಿಕಾರ ಮತ್ತು ಹೆಚ್ಚೂ ಏನು ; ಇಂಡಿಯಾ ಸರ್ಕಾರದವರು ಈ ಕಾರ್ಖಾನೆಯ ಮೇಲೆ ಎಷ್ಟರಮಟ್ಟಿಗೆ ಮತ್ತು ಯಾವ ವಿಧವಾದ ಹತೋಟಿಯನ್ನು ಹೊಂದಿದ್ದಾರೆ ?

ಉತ್ತರ.—ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸಿನ ಮತ್ತು ಕೈಗಾರಿಕೆ ಶಾಖೆಗಳ ಸಚಿವರು).—

(a) 1950ನೆಯ ಇಸವಿ ಸೆಪ್ಟೆಂಬರ್ 30ನೆಯ ತಾರೀಖಿನ ಲೆಕ್ಕಗಳ ಆಧಾರದ ಮೇರೆ—

		ಲಕ್ಷ ರೂಪಾಯಿಗಳು
ಬಂಡವಾಳದ ಪೆಟ್ಟಿ	...	405.71
ಕೆಲಸ ನಡೆಯಿಸುವುದಕ್ಕಾಗಿ ಕೊಟ್ಟಿರುವ ಮುಂಗಡ	...	40.51
ಒಟ್ಟು	...	446.22

(b) ಹಾದು.

		ಲಕ್ಷ ರೂಪಾಯಿಗಳು
1947-48ನೆಯ ಸಾಲಿನಲ್ಲಿ	...	11.06
1948-49 ,,	...	13.10
1949-50 ,,	...	5.05

(c) ಕಾರ್ಖಾನೆಯ ಆಡಳಿತವನ್ನು ಆಡಳಿತ ನಿರ್ವಹಣದ ಒಂದು ಬೋರ್ಡಿನವರಿಗೆ ("ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್"ನವರಿಗೆ) ವಹಿಸಿಕೊಡರಾಗಿದೆ. ಈ ಆಡಳಿತ ನಿರ್ವಹಕ ಬೋರ್ಡು ಸರ್ಕಾರದವರ ಹತೋಟಿಗೊಳಪಟ್ಟಿದೆ. ಕಾರ್ಖಾನೆಯಲ್ಲಿ ತಯಾರಾಗುವ ಎಲ್ಲಾ ಉಕ್ಕನ್ನೂ ಇಂಡಿಯಾ ಸರ್ಕಾರದವರು "ಕಾಮರ್ಷ್ ಪೂರ್" ಶೇಖರಣೆಗೆ ತೆಗೆದುಕೊಂಡು, ಹಂಚಿಕೆಗಾಗಿ ಅದನ್ನು ತಮ್ಮ "ಐರ್ಸ್ ಅಂಡ್ ಸ್ಟೀಲ್ ಕಂಟ್ರೋಲರ್" ಅವರ ವಶಕ್ಕೆ ಒಪ್ಪಿಸುತ್ತಾರೆ. ಕಾರ್ಖಾನೆಯ ವಿಷಯದಲ್ಲಿ ಇಂಡಿಯಾ ಸರ್ಕಾರದವರು ಬೇರೆ ಯಾವ ಹತೋಟಿ, ಅಧಿಕಾರಗಳನ್ನೂ ಚಲಾಯಿಸುತ್ತಿಲ್ಲ.

ಶ್ರೀ ಜಿ. ವೀರಪ್ಪನವರು.—ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಾಗಿ ಸರ್ಕಾರದವರು ಹಾಕಿರತಕ್ಕ ಒಟ್ಟು ಮೊಬಲಗೆಷ್ಟು, ಎಂಬುದಕ್ಕೆ ಇಲ್ಲಿ 405.71 ಲಕ್ಷ ರೂಪಾಯಿ ಎಂದು ತಿಳಿಸಲಾಗಿದೆ, Shall I take it that it is the full investment from the very beginning of these works ?

The Hon'ble Sri H. C. DASAPPA.—Yes.

ಶ್ರೀ ಜಿ. ವೀರಪ್ಪನವರು.—ಈ working advance ಎಂದರೇನು, ಇದನ್ನೇಕೆ ಕೊಡುವುದು ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇದನ್ನು ಕೊಟ್ಟೇಕೆಂಡಬೇಕು. ಯಾವುದೇ ಒಂದು ಕಂಪೆನಿಯಾದರೂ fixed capital ಅಲ್ಲದೆ raw materials ಮುಂತಾದ್ದನ್ನು ತೆಗೆದುಕೊಳ್ಳಬೇಕಾಗುತ್ತದೆ, ಇದಕ್ಕಾಗಿ working advance ಕೊಡಬೇಕು. ಇದಿಲ್ಲದಿದ್ದರೆ ಯಾವುದೂ ಕೆಲಸ ಮಾಡುವುದಕ್ಕಾಗುವುದಿಲ್ಲ.

ಶ್ರೀ ವಿ. ವೀರಪ್ಪನವರು.—ಇದರಿಂದ ಬರುತ್ತಿರುವ ಲಾಭವನ್ನು ತೋರಿಸಲು ಮೂರು ವರ್ಷಗಳ ಅಂಕಿಗಳನ್ನು ಕೊಡಲಾಗಿದೆ. 1947-48 ರಲ್ಲಿ 11.06 ಲಕ್ಷ ರೂಪಾಯಿ ಬಂದಿದೆ, 1948-49 ರಲ್ಲಿ 13.10 ಲಕ್ಷ ಬಂದಿದೆ. ಇದು 1949-50 ರಲ್ಲಿ 5 ಲಕ್ಷಕ್ಕೆ ಇಳಿದಿದೆ ಕಾರಣವೇನು ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆ ವರ್ಷದಲ್ಲಿ 9 ತಿಂಗಳ ಲೆಕ್ಕ ಮಾತ್ರ ಕೊಟ್ಟಿದೆ ಏಕೆಂದರೆ ಬ್ಲಾಸ್ಟ್ ಫರ್‌ನೇಸ್ shut down ಆಯಿತು, ಆಗ ಕೆಲಸ ನಿಂತುಹೋಯಿತು. ಇದೇ ಮುಖ್ಯ ಕಾರಣ.

ಶ್ರೀ ಜಿ. ವೀರಪ್ಪನವರು.—ಈ ಲಾಭ ಬಂದಿರುವ ಅಂಕಿಗಳನ್ನು ಕೊಡಬೇಕಾದರೆ, ಈ ಕಾರ್ಖಾನೆಗೆ ನರ ಬರಾಯಾಗುವ ಸಾದೆ ಇದ್ದಲಿನ ಬೆಲೆಯನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆಯೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಎಲ್ಲವೂ ಸೇರಿದೆ.

Sri G. VEERAPPA.—What is the rate at which you procure fuel for the Works ?

The Hon'ble Sri H. C. DASAPPA.—I want notice. I am sorry that for a detailed question like this, namely, what is the expense incurred in connection with fuel supply to the Bhadravathi Iron and Steel Works, answers cannot be given without notice. Probably the Budget figures will show the details.

Sri G. VEERAPPA.—My object is to know whether it is working at a profit. That is why some of these questions do arise.

ಅಧ್ಯಕ್ಷರು.—ಅದಕ್ಕೆ ಉತ್ತರ ಹೇಳಿದ್ದಾರೆ.

ಶ್ರೀ ಜಿ. ವೀರಪ್ಪನವರು.—ನಾನು ಕೇಳುವುದಿಷ್ಟೆ; ಬಹಳ ರಿಯಾಯಿತಿ ದರದಲ್ಲಿ ಸಾದೆ; ಇದ್ದಿಲನ್ನು ಕೂಡು ಕೊಳ್ಳುತ್ತಿಲ್ಲವೆ? ಇದರಿಂದ.....

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹಾಗೆ ಹೇಳುವುದಕ್ಕಾಗುವುದಿಲ್ಲ. ಬ್ಲಾಕ್‌ನಲ್ಲಿ ತೆಗೆದುಕೊಳ್ಳುವಾಗ, ನಾವು ವಿದ್ಯುಚ್ಛಕ್ತಿಗೆ ಹೇಗೆ ರಿಯಾಯಿತಿ ತೋರಿಸುತ್ತೇವೋ ಹಾಗೆ, ಇದಕ್ಕೂ ಸ್ವಲ್ಪ ರಿಯಾಯಿತಿ ತೋರಿಸಬಹುದು.

ಶ್ರೀ ಜಿ. ವೀರಪ್ಪನವರು.—ಈಗಿನ ಮಾರ್ಕೆಟ್ ಬೆಲೆಯ ಪ್ರಕಾರ ತೆಗೆದುಕೊಂಡರೆ ನಷ್ಟವಾಗುತ್ತದೆ, ಲಾಭ ಬರುವುದಿಲ್ಲವೆಂದು ಹೇಳುತ್ತೇನೆ ಒಪ್ಪುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದು ತಮ್ಮ ಅಭಿಪ್ರಾಯ, ಅದನ್ನು ಸರ್ಕಾರದವರು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಜಿ. ವೀರಪ್ಪನವರು.—ಭದ್ರಾವತಿ ಕಾರ್ಖಾನೆಯಲ್ಲಿ ಸಿಬ್ಬಂದಿ ಒಂದಕ್ಕೆ ಎರಡರಷ್ಟು ಜಾಸ್ತಿ ಇದೆ ಎಂಬುದು ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲ.

ಶ್ರೀ ಜಿ. ವೀರಪ್ಪನವರು.—ಇದೇ ರೀತಿಯ ಟಾಟಾ ಕಾರ್ಖಾನೆಯಲ್ಲಿ ಪರಿಸ್ಥಿತಿ ಹೇಗಿದೆ ಎಂಬುದನ್ನು ಹೋಲಿಸಿ ನೋಡಿದ್ದೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅಲ್ಲಿ ಹೇಗಿದೆ ಎಂಬ ವಿವರಗಳು ನಮಗೆ ಗೊತ್ತಿಲ್ಲ.

ಶ್ರೀ ಜಿ. ವೀರಪ್ಪನವರು.—ಇದಕ್ಕೆ ಹಾಕಿರುವ ಬಂಡವಾಳದ ಮೇಲೆ ಬಡ್ಡಿ ಲೆಕ್ಕಾಚಾರ ಹಾಕಿದರೆ ಇದರಲ್ಲಿ ಬಹಳ ಮತಮಾನ ಬರುತ್ತಿದೆಯೊ ಅಥವ ನಷ್ಟವಾಗುತ್ತಿದೆಯೋ ಬೇರೆ ಕಡೆಗಳಿಗೆ ಹೋಲಿಸಿ ನೋಡಿದರೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಪುನಃ ನಾನು ಹೇಳಬೇಕಾಗಿದೆ. ಈ 405.71 ಲಕ್ಷ ರೂಪಾಯಿನಲ್ಲಿ ಹೊಸದಾಗಿ ಮಾಡಿರುವ ಅಭಿವೃದ್ಧಿ ಕೆಲಸಗಳು ಎಂದರೆ, ಎರೆಕ್ಟ್ರಿಕ್ ಪಿಗ್ ಐರನ್ ಫರ್‌ನೇಸ್ ಮುಂತಾದುವೆಲ್ಲವೂ ಸೇರಿವೆ. ಅದರ ಕೆಲಸ ಪ್ರಾರಂಭವಾದ ಮೇಲೆ ಉತ್ಪತ್ತಿ, ಇನ್ನೂ ಹೆಚ್ಚಾಗುತ್ತದೆ. ಆದುದರಿಂದ ಇಷ್ಟೇ ಲಾಭ ಎಂದು ತಿಳಿದುಕೊಳ್ಳಬಾರದು.

Sri G. VEERAPPA.—Is it not a fact that the prices of Iron and Steel have increased and consequently there is a great demand for iron and steel materials?

The Hon'ble Sri H. C. DASAPPA.—Of course there is.

Sri G. VEERAPPA.—In spite of it, how is it that we are not getting the expected profits?

The Hon'ble Sri H. C. DASAPPA.—To verify this you must take the figures for a series of years. Then you will know the results. ಹೀಗೆ ನೋಡಿದರೆ ಚೆನ್ನಾಗಿದೆ.

Sri G. VEERAPPA.—Has the working not come to a stage when Government could think of appointing a Committee to investigate the reasons as to why they are not getting expected profits?

The Hon'ble Sri H. C. DASAPPA.—There is absolutely no necessity.

ಶ್ರೀ ಜಿ. ವೀರಪ್ಪನವರು.—ಹಿಂದಿನ ವರ್ಷಗಳ ಅಂಕಿ ಅಂಶಗಳನ್ನು ತೆಗೆದು ಕೊಂಡರೆ, ನಷ್ಟವಾಗುತ್ತಿತ್ತು. ಹೋಗಲಿ, Distribution of quota ಇಂಡಿಯಾ ಸರ್ಕಾರದವರು ಹೇಳಿದ ಹಾಗೆ ಮಾಡುತ್ತೀರಾ?

The Hon'ble Sri H. C. DASAPPA.—It does not arise out of this question.

Sri G. VEERAPPA.—It does arise out of the answer furnished to clause (c).

The Hon'ble Sri H. C. DASAPPA.—It does not arise.

ಶ್ರೀ ಜಿ. ವೀರಪ್ಪನವರು.—ನಾನು ಕೇಳುತ್ತಿರುವುದು ನೀವು ತಯಾರು ಮಾಡುವ ಕಬ್ಬಿಣವನ್ನು ಇಂಡಿಯಾ ಸರ್ಕಾರದವರು ಹೇಳಿದ ಹಾಗೆ ಹಂಚಿಕೆ ಮಾಡಬೇಕೆ?

The Hon'ble Sri H. C. DASAPPA.—It is an all-India Pool. So we are bound by the arrangement. The Central Government directs the distribution of iron and steel produced.

Sri G. VEERAPPA.—I want to know whether our Government have got power to distribute iron and steel produced in the State as they like.

The Hon'ble Sri H. C. DASAPPA.—No, we cannot do that.

Sri G. VEERAPPA.—What is the percentage that we would be getting?

The Honb'le Sri H. C. DASAPPA.—I have already answered it.

ಶ್ರೀ ಜಿ. ವೀರಪ್ಪನವರು.—ನಮ್ಮ ಸರ್ಕಾರಕ್ಕೆ ಇಷ್ಟು ಕೊಡುತ್ತೇವೆಂದು ಇಂಡಿಯಾ ಸರ್ಕಾರದವರು ಒಪ್ಪಿದ್ದಾರೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರೇ ನಿಗದಿ ಮಾಡುತ್ತಾರೆ. Primarily on a *per capita* basis on the industrial side. On the agricultural and Grow More Food side also the quota is fixed and to that extent we are getting.

ಶ್ರೀ ಜಿ. ವೀರಪ್ಪನವರು.—ಇದರಿಂದ ನಮಗೆ ಬೇಕಾದಷ್ಟನ್ನಿಟ್ಟುಕೊಂಡು ಹೆಚ್ಚು ಸಾಧ್ಯವಿಲ್ಲವಲ್ಲವೆ?

The Hon'ble Sri H. C. DASAPPA.—Please turn over to the answer given to question No. 225 in Part VI. You will get all the details there. You will not then have to ask me any more questions.

Sri G. VEERAPPA.—Are the Government aware that this sort of restriction of the Government of India have caused very great inconvenience with regard to

(SRI G. VEERAPPA.)

the distribution of materials to the agriculturists?

The Hon'ble Sri H. C. DASAPPA.—It has, undoubtedly. Bihar State, for instance, cannot have all the iron and steel produced by the Tatas. Likewise, Mysore State also cannot have the iron and steel produced by them.

Sri G. VEERAPPA.—Is it the same case with the Bihar?

The Hon'ble Sri H. C. DASAPPA.—Absolutely so. How can Bihar have all the iron and steel produced? The Government of India will not allow it.

ಶ್ರೀ ಜಿ. ವೀರಪ್ಪನವರು.—ಹಾಗಾದರೆ ನಮಗೆ ದೊರಕುವುದು 1700 ಟನ್ ಮಾತ್ರವೆ ?

The Hon'ble Sri H. C. DASAPPA.—ಅಷ್ಟೇಅಲ್ಲ. That is only industrial quota. Agricultural quota is different, as I have already told you.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ನಮ್ಮ ಭದ್ರಾವತಿ ಕಾರ್ಖಾನೆಯಲ್ಲಿ ತಯಾರಾಗುವುದೆಲ್ಲ ಇಂಡಿಯಾ ಸರ್ಕಾರದ ಪೂಲ್‌ಗೆ ಹೋಗುತ್ತದೆಯೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹೌದು.

ಶ್ರೀ ಬಿ. ಹುಚ್ಚೇಗೌಡರು.—ಅದರಲ್ಲಿ ಸುಮಾರು 1,700 ಟನ್ ಮಾತ್ರ ತಾನೆ ನಮಗೆ ಬರುವುದು ?

ಅಧ್ಯಕ್ಷರು.—ಕೇಳಿದ್ದ ಪ್ರಶ್ನೆಯನ್ನೇ ಪುನಃ ಕೇಳುತ್ತಿದ್ದೀರಿ. ಅದು ಉತ್ತರದಲ್ಲೇ ಇದೆ.

ಶ್ರೀ ಬಿ. ಹುಚ್ಚೇಗೌಡರು.—ಇದಕ್ಕೆ ಬೆಲೆ ಗೊತ್ತು ಮಾಡುವವರು ಇಂಡಿಯಾ ಸರ್ಕಾರದವರೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹೌದು.

ಶ್ರೀ ಬಿ. ಹುಚ್ಚೇಗೌಡರು.—ಇದರ ಮೇಲೆ ಹಾಕಿರ ತಕ್ಕ ಬಂಡವಾಳದ ಮೇಲೆ ಸೇಕಡ 1½ ಯಷ್ಟು ಪ್ರತಿ ಫಲ ಬರುತ್ತಿದೆಯಲ್ಲವೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ತಾವೇ ಲೆಕ್ಕ ಹಾಕಿಕೊಳ್ಳಬಹುದು.

ಶ್ರೀ ಬಿ. ಹುಚ್ಚೇಗೌಡರು.—ಇದರಿಂದ ಹಾಲಿನಮ್ಮ ಕಾರ್ಖಾನೆಗೆ ಲುಕ್ಸಾನಾಗುತ್ತಿದೆಯೆಂಬುದನ್ನು ಇಂಡಿಯಾ ಸರ್ಕಾರದವರ ಗಮನಕ್ಕೆ ತಂದಿದ್ದೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದಕ್ಕೇ ಟ್ಯಾರಿಫ್ ಬೋರ್ಡಿನವರು ಬಂದು ನಮ್ಮ working expenses ಎಲ್ಲವನ್ನೂ ಪರಿಶೀಲನೆ ಮಾಡಿ Retention price ಎಂದು ಸ್ಪೆಷಲ್ಲಾಗಿ ನಮಗೊಂದು ದರ ಗೊತ್ತುಮಾಡಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಇದಕ್ಕೆ ಹಾಕಿರುವ ಬಂಡವಾಳ ನೀವು ಶೇಕಡ 6 ರಂತೆ ಮತ್ತು 7¼ ರಂತೆ ತೆಗೆದುಕೊಂಡ ಸಾಲದಿಂದ ತೆಗೆದುಕೊಂಡಿದ್ದಲ್ಲವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅಲ್ಲ.

ಶ್ರೀ ಬಿ ಹುಚ್ಚೇಗೌಡರು.—1917 ರಲ್ಲಿ ನೀವು ಯಾವ ದರದಲ್ಲಿ ಸಾಲ ತೆಗೆದುಕೊಂಡಿರಿ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇದಕ್ಕೇ ಅದನ್ನು ತೆಗೆದ ಕೊಂಡದ್ದೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—2½ ಕೋಟಿ ರೂಪಾಯಿಗಳನ್ನು ಇದಕ್ಕೆ ಖರ್ಚುಮಾಡಿದ್ದು ಈ ಸಾಲದ ಮೊಬಲಗಿನಿಂದ ಅಲ್ಲವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀಸ್ ಬೇಕು. ಇದರಿಂದ ಎಂದು ಹೇಳಲಿವುದಕ್ಕಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಆಗ್ಗೆ ನಮ್ಮ ಸರ್ಕಾರದವರು 6½% ನಂತೆ ಬಡ್ಡಿ ಕೊಟ್ಟಿರುವುದು ನಿಜವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕೆಲವು ಸಾಲಗಳ ಮೇಲೆ ಹಾಗೆ ಕೊಟ್ಟಿದ್ದೇವೆ. ಅವೆಲ್ಲಾ ಹಿಂದಿನ ಚರಿತ್ರೆ.

ಶ್ರೀ ಬಿ. ಹುಚ್ಚೇಗೌಡರು.—4½ ಲಕ್ಷ ರೂಪಾಯಿಗಳನ್ನು ಈಗ ಕೆಲವು ವರ್ಷಗಳ ಹಿಂದೆ write off ಮಾಡಿರುವುದೂ ಇದರಲ್ಲಿ ಸೇರಿದೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಬಹಳ ವರ್ಷಗಳ ಹಿಂದೆ write off ಮಾಡಿದ್ದು. ಬಹುಶಃ ಅದು ಸೇರಿರಲಾರದು.

ಶ್ರೀ ಬಿ. ಹುಚ್ಚೇಗೌಡರು.—ಈ ಹಣವೂ ಸೇರಿದರೆ 5 ಕೋಟಿ ರೂಪಾಯಿಗಳ ಮೇಲೆ ಬಂಡವಾಳವಾಗುವುದಿಲ್ಲವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅಷ್ಟಾಗುವುದಿಲ್ಲ. ನುಮಾರು ಹತ್ತಿರ ಹತ್ತಿರ 5 ಕೋಟಿಯಾಗಬಹುದು.

ಶ್ರೀ ಬಿ. ಹುಚ್ಚೇಗೌಡರು.—ಅಲ್ಲಿಗೆ ವರ್ಷಕ್ಕೆ 35 ಲಕ್ಷ ರೂಪಾಯಿಗಳಾದರೂ ನಮಗೆ ಬರಬೇಕಲ್ಲವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದು ಚರ್ಚೆಯಾಯಿತು. That is not the way of putting supplementaries. Please put a question.

ಶ್ರೀ ಬಿ. ಹುಚ್ಚೇಗೌಡರು.—ಹೀಗೆ ಇಂಡಿಯಾ ಸರ್ಕಾರದವರ ಪೂಲಿಗೆ ನೀವು ಸೇರಿರುವಾಗ ನಮ್ಮ ಬಂಡವಾಳದ ಮೇಲೆ ನಾವು ಕೊಡತಕ್ಕ ಬಡ್ಡಿ ಬಹಳ ಜಾಸ್ತಿಯಾದುದರಿಂದ, ಈ ಪ್ರಕಾರ ನಮ್ಮ liabilities ಜಾಸ್ತಿಯಾಗಿರುವಾಗ, ನಾವು ಇತರರಿಗೆ ಕೊಡುತ್ತಿರುವಷ್ಟಕ್ಕಾದರೂ ಬೆಲೆಯನ್ನು ಜಾಸ್ತಿ ಮಾಡಿ ಕೊಡುವಂತೆ ಒತ್ತಾಯವಾಗಿ ಏಕೆ ಹೇಳಕೂಡದು ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಎಲ್ಲಾ ಒತ್ತಾಯ ಮಾಡುತ್ತಿದ್ದೇವೆ. ಆದರೆ ಅದಕ್ಕೂ ಒಂದು ಮಿತಿಯಿದೆ. ಬೇರೆ ಕಾರ್ಖಾನೆಗಳಲ್ಲಿ ಯಾವ ದರವಿದೆ, ಹೊರಗಡೆಯಿಂದ ತರಿಸುವುದಕ್ಕೆ ಯಾವ ದರ ಬೀಳುತ್ತಿದೆ, ನಮ್ಮ ದರ ಎಷ್ಟಿದೆ ಎಂಬುದನ್ನೆಲ್ಲಾ ಹೋಲಿಕೆ ಮಾಡಿಕೊಂಡು ತೀರ್ಮಾನ ಮಾಡಬೇಕಾಗಿದೆ. ಅಂಥಾ ದ್ದರಲ್ಲೂ ಇಂಡಿಯಾ ಸರ್ಕಾರದವರು ನಮಗೆ ವಿಶೇಷ ವಾದ ಒಂದು ರಿಯಾಯಿತಿ ಕೊಟ್ಟಿದ್ದಾರೆ. ಏನೆಂದರೆ, ಒಂದು ಟನ್ನಿಗೆ 100 ರೂಪಾಯಿ ಜಾಸ್ತಿಮಾಡಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಬೆಲೆಗಳನ್ನು ಜಾಸ್ತಿ ಮಾಡದೆ ಇದ್ದರೆ ನಮ್ಮ ಕಬ್ಬಣದ ಕಾರ್ಖಾನೆಗೆ ಲುಕ್ಸಾನಾಗುವುದರಿಂದ ನಬ್ಬಿಡಿಯನ್ನಾದರೂ ಏಕೆ ಕೊಡಕೂಡದು ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದಕ್ಕಾಗಿಯೇ Retention Price ಎಂದು 100 ರೂಪಾಯಿ ಕೊಡುತ್ತಿದ್ದಾರೆ. ನಮಗೆ ಬೀಳುವ ಕೆಲಸ ಮಾಡುವ ಖರ್ಚು ವೆಚ್ಚಗಳನ್ನೆಲ್ಲಾ ಅವರು ಲೆಕ್ಕಕ್ಕೆ ತೆಗದುಕೊಂಡು ಸುಮಾರಾಗಿ ಹೆಚ್ಚಿಗೆ ವ್ಯತ್ಯಾಸವಾಗದಂತೆ ನೋಡಿಕೊಂಡು ಕೊಂಡ ಫಾಯಿದೆ ಬರುವಂತೆ ದರ ಗೊತ್ತುಮಾಡಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗೆ ಈ ರೀತಿ ಸುಮ್ಮನೆ ಸ್ವಲ್ಪ ಜಾಸ್ತಿ ಕೊಟ್ಟರೆ ಆಯಿತೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದು ಅಭಿಪ್ರಾಯದ ವಿಷಯ.

ಶ್ರೀ ಬಿ. ಹುಚ್ಚೇಗೌಡರು.—ಈರೀತಿ ಕೊಡುವುದರಿಂದ ಕೇವಲ ಶೇಕಡ 1ರಷ್ಟು ಬರುತ್ತದೆಯಲ್ಲವೇ? ಇದರಿಂದ ನಮಗೆ ವಾಸ್ತವವಾಗಿ ಲುಕ್ಸಾನಾಗುತ್ತದೆಯಲ್ಲವೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದು ಚರ್ಚೆಯಾಯಿತು.

ಶ್ರೀ ಬಿ. ಹುಚ್ಚೇಗೌಡರು.—ಇದನ್ನು ಕೊನೆಯಪಕ್ಷ ಶೇಕಡ 5—6 ಆದರೂ ನಫೆ ಬರುವಂತೆ ಮಾಡಿಕೊಳ್ಳಲು ಇಂಡಿಯಾ ಸರ್ಕಾರದವರನ್ನು ನಬ್ಲಿಡೈಸ್ ಮಾಡುವುದರ ಮೂಲಕವಾಗಲಿ ದರವನ್ನು ಹೆಚ್ಚಿಸುವುದರಿಂದಲಾಗಲೀ ಸಹಾಯ ಮಾಡಬೇಕೆಂದು ಕೇಳುವುದಕ್ಕೆ ಸಾಧ್ಯವಿಲ್ಲವೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನಾವೂ ಒಟ್ಟಿನಲ್ಲಿರುವಾಗ ಪ್ರಯತ್ನವನ್ನೇನೋ ಮಾಡಬಹುದು. ಆದರೆ ಸಾಧ್ಯ, ಅಸಾಧ್ಯ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ನಮಗೆ ಬೇಕಾಗುವಷ್ಟೂ ಸಹ ಕಬ್ಬಿಣ ನಮಗೆ ಸಿಕ್ಕುತ್ತಿಲ್ಲ. ಇದನ್ನೂ ಏಕೆ ಒತ್ತಾಯ ಮಾಡಕೂಡದು? 5 ಕೋಟಿ ರೂಪಾಯಿಗಳ ಬಂಡವಾಳ ಹಾಕಿ 30 ವರ್ಷದಿಂದ ಕೀಗೆಯೇ ಬಿದ್ದಿದ್ದೇವೆ. ಈಗಲಾದರೂ ಒಂದು ನಿರ್ದಿಷ್ಟ ರೀತಿಯಲ್ಲಿ ಏಕೆ action ತೆಗೆದುಕೊಳ್ಳಕೂಡದೆಂದು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು.—ಯಾವ ಕಾಲದಲ್ಲಿ ಒತ್ತಾಯ ಮಾಡುವುದು? ಪ್ರಶ್ನೆಗಳ ಕಾಲದಲ್ಲಲ್ಲ. ಈಗ ನೀವೇನಿದ್ದರೂ ವಿಷಯವನ್ನು ತಿಳಿದುಕೊಳ್ಳಬಹುದು.

ಶ್ರೀ ಬಿ. ಹುಚ್ಚೇಗೌಡರು.—ಇದುವರೆಗೂ ಈ ವಿಷಯದಲ್ಲಿ ಏನಾದರೂ ಕಾರ್ಯಕ್ರಮ ಕೈಕೊಂಡಿದ್ದೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕಾರ್ಯಕ್ರಮ ತೆಗೆದುಕೊಂಡದ್ದಕ್ಕೆ ಅವರಿಷ್ಟು ಮಾಡಿರುವುದು.

Sri Kadidal MANJAPPA (Shimoga District—General).—Are the Government aware that as soon as controls over iron and s eel are removed, the Mysore Iron and Steel Works would be working at a loss?

The Hon'ble Sri H. C. DASAPPA.—On the other hand they would be working at much more profit.

Sri Kadidal MANJAPPA.—Have the Government compared the cost of production per ton with that of the Tata's?

The Hon'ble Sri H. C. DASAPPA.—Yes.

Sri Kadidal MANJAPPA.—What is it?

The Hon'ble Sri H. C. DASAPPA.—There is a large difference.

Sri Kadidal MANJAPPA.—What is the cost of production per ton at the Tata's and that in our concern?

The Hon'ble Sri H. C. DASAPPA.—Notice.

Sri Kadidal MANJAPPA.—Is the cost of production here more or less?

The Hon'ble Sri H. C. DASAPPA.—The cost of production in Mysore Iron and Steel Works is very much more.

Sri Kadidal MANJAPPA.—Have the Government tried to effect any retrenchment?

The Hon'ble Sri H. C. DASAPPA.—That has been in view right from the beginning, for the last two or three years. Developments are going on and we are not increasing the staff and establishment in proportion to developments.

Sri H. C. LINGA REDDY (Kolar District—General).—Have the Government under contemplation any schemes for the expansion of the Mysore Iron and Steel Works?

The Hon'ble Sri H. C. DASAPPA.—That is a matter which my three Budget speeches have been dealing with.

Sri H. C. LINGA REDDY.—When will they be put into operation?

The Hon'ble Sri H. C. DASAPPA.—Some of them are going on; for example the Acetic Acid plant, the Cement Plant, the Ferro Silicon Plant and the Electric Pig Iron Furnace will be in operation somewhere in January or February next year.

Sri H. C. LINGA REDDY.—What will be the increase in production after the beginning of the expansion schemes?

The Hon'ble Sri H. C. DASAPPA.—Even that I have answered in the two or three Budget speeches. The pig iron productive capacity will be increased from 25,000 tons to 100,000 tons per day; steel from 25,000 to 100,000 tons per day; cement from 25 tons to 100 tons per day; Ferro-Silicon Plant is a small plant with a productive capacity of nearly 8 to 10 tons per day; and with regard to Acetic Acid Plant I am not sure what the exact quantity is.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—Common pool ಮಾಡಿರುವುದರ ಉದ್ದೇಶ ಬರೀ ಉತ್ಪತ್ತಿ ಮಾಡಿರುವುದನ್ನು ಹಂಚಿಕೆ ಮಾಡುವುದಕ್ಕೆ ಮಾತ್ರವೋ ಅಥವಾ ಈ ಕಾರ್ಖಾನೆಗಳನ್ನು ಅಭಿವೃದ್ಧಿ ಸ್ಥಿತಿಗೆ ತರುವುದಕ್ಕೆ ಸಹಾಯ ಮಾಡುವುದೂ ಆಗಿದೆಯೋ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಏರ ಡಕ್ಕೂ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಈಗ ನಮ್ಮ ದೇಶದಲ್ಲಿ ಎಷ್ಟು ಅವಶ್ಯಕತೆಯಿದೆಯೋ ಅಷ್ಟು ಕಬ್ಬಿಣ ಇಲ್ಲಿ ಸರಬರಾಯಿಯಾಗುತ್ತಿಲ್ಲವಲ್ಲವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಉಕ್ಕಿನ ಮಟ್ಟಿಗೆ ನಮಗೆಷ್ಟು ಅವಶ್ಯಕತೆಯಿದೆಯೋ ಅಷ್ಟು ಉತ್ಪತ್ತಿಯಾಗುತ್ತಿಲ್ಲ. ಅದಕ್ಕೋಸ್ಕರವೇ ಅಹಾರ ವನ್ನು ಯಾವ ರೀತಿ ಸಂಚಿಕೆ ಮಾಡುತ್ತಿದ್ದಾರೋ ಆದೇ ರೀತಿ ಒಂದು ಪೂಲ್‌ಮಾಡಿ ಹಂಚಿಕೆ ಮಾಡಬೇಕಾದ ಪ್ರಮೇಯ ಉಂಟಾಗಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅಂದರೆ common pool ಎಂಬುದಕ್ಕೆ ಪದಾರ್ಥಗಳನ್ನು ಸರ ಬರಾಯಿ ಮಾಡುವುದೊಂದೇ ಉದ್ದೇಶವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಪರಿಣಾ ಮದಲ್ಲಿ ಅದೇ ಪ್ರಕಾರ ಆಗುತ್ತದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಹಾಗಾದರೆ ಭದ್ರಾವತಿ ಕಬ್ಬಿಣದ ಕಾರ್ಖಾನೆಯನ್ನು ಅಭಿವೃದ್ಧಿಗೆ ತರುವುದಕ್ಕೆ ಇಂಡಿಯಾ ಸರ್ಕಾರದವರು ಸಹಾಯ ಮಾಡುವುದಕ್ಕೆ ಒಪ್ಪಿದ್ದಾರೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಬೇರೆ ಕಡೆ ಇಂಡಿಯಾ ದೇಶದಲ್ಲಿ ಕಬ್ಬಿಣ ಮತ್ತು ಉಕ್ಕಿಗಿರುವ ಬೆಲೆ ಗಿಂತಲೂ ನಮಗೆ ಟನ್ನಿಗೆ 100 ರೂಪಾಯಿ ಹೆಚ್ಚಿಗೆ ಕೊಟ್ಟಿರುವುದೇ ಅದಕ್ಕೊಂದು ನಿದರ್ಶನ. ಸ್ವಲ್ಪ loans ಮುಂತಾದುವುಗಳನ್ನು ಕೊಡಬೇಕೆಂದು ಅವರು ಉದ್ದೇಶಪಟ್ಟಿದ್ದಾರೆ. ಈ ರೀತಿಯಾಗಿ ಸಹಾಯ ಮಾಡುವುದಕ್ಕೆ ಅವರೇ ಮುಂದೆ ಬರುವವರಾಗಿ ದ್ದಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ನಮಗೀಗ ನಮ್ಮ ಉಕ್ಕಿನ ಯಂತ್ರವನ್ನು ಇನ್ನೂ ಅಭಿವೃದ್ಧಿಗೊಳಿಸ ಬೇಕೆಂದು ಒಂದು ಉದ್ದೇಶವಿದೆಯಲ್ಲಾ, ಅದಕ್ಕೇನಾ ದರೂ ಈ common pool ನಿಂದ ಹಣ ಬರುತ್ತ ದೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—Common pool ನಿಂದರೇ ಬರುತ್ತದೆಯೋ ಅಥವಾ ಇನ್ನಾವುದಾದರೂ ಭಾಗದಿಂದ ಬರುತ್ತದೆಯೋ ಹೇಳು ವುದಕ್ಕಾಗುವುದಿಲ್ಲ. ಅಂತೂ, they are inclined to favour a loan for the expansion of the Iron and Steel Works in Mysore.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಈಗ ನೀವು ಡಿಪ್ರೀಸಿಯೇಷನ್ ಫಂಡಿಗೆ ಎಷ್ಟು ಸೇರಿಸ ಬೇಕೋ ಅಷ್ಟು ಸೇರಿಸುತ್ತಿದ್ದೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸೇರಿಸು ತ್ತಿದ್ದೇವೆ.

ಶ್ರೀ ಟಿ. ಮಾದಯ್ಯಗೌಡರು.—ಇದುವರೆಗೂ ನೀವು ಶೇಕಡ ಎಷ್ಟು ಡಿಪ್ರೀಸಿಯೇಷನ್ ಫಂಡು ಏರ್ಪಾಡು ಮಾಡಿದ್ದೀರಿ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದಕ್ಕೆ ಲ್ಲಾ regular formality ಇದೆ. ಅದಕ್ಕನುಸಾರ ವಾಗಿ ಈ ಫಂಡಿಗೆ ಹಣ ಹಾಕಲಾಗುತ್ತದೆ.

ಶ್ರೀ ಟಿ. ಮಾದಯ್ಯಗೌಡರು.—ಮೊದಲು ಕೆಲವು ಕಾಲ ಈ ಡಿಪ್ರೀಸಿಯೇಷನ್ ಫಂಡಿಗೆ ಹಣ ಕೊಡುತ್ತಿರ ಲ್ಲ, ಈಗ ಅದನ್ನು ಹಾಕಿ ಒಟ್ಟು ಎಷ್ಟು ಫಂಡಿರ ಬೇಕೋ ಅಷ್ಟು ಕೂಡಿಟ್ಟಿದ್ದೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಟ್ಟಿ ದ್ದಾರೆ.

ಶ್ರೀ ಟಿ. ಮಾದಯ್ಯಗೌಡರು.—ಈ ಕಬ್ಬಿಣದ ಕಾರ್ಖಾನೆಯಿಂದ ರಾಯಲ್ಟಿ ಎಷ್ಟು ಬರುತ್ತಿದೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀ ಸ್ ಬೇಕು.

ಶ್ರೀ ಟಿ. ಮಾದಯ್ಯಗೌಡರು.—ಅವರಿಂದ ಏನಾ ದರೂ ರಾಯಲ್ಟಿ ಬರುತ್ತಿದೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀ ಸ್ ಬೇಕೆಂದಮೇಲೆ ಮತ್ತೆ ಅದನ್ನೇ ಕೇಳುವುದರಿಂದ ಪ್ರಯೋಜನವಿಲ್ಲ.

ಶ್ರೀ ಟಿ. ಮಾದಯ್ಯಗೌಡರು.—ಈ ಕಬ್ಬಿಣದ ಕಾರ್ಖಾನೆಯಿಂದ ಸೆಸ್ ಏನಾದರೂ ವಸೂಲಾಗು ತ್ತಿದೆಯೇ ?

The Hon'ble Sri H. C. DASAPPA.—I have no idea.

ಶ್ರೀ ಟಿ. ಮಾದಯ್ಯಗೌಡರು.—ಕೂಲಿಗಾರರಿಗೆ amenities ಗಾಗಿ, ಮತ್ತು ಅವರ ಕ್ಷೇಮಾಭಿವೃದ್ಧಿ ಗಾಗಿ ಅವರು ಪ್ರತಿ ಸಾಲಿನಲ್ಲೂ ಎಷ್ಟು ಲಕ್ಷ ರೂಪಾಯಿ ಗಳನ್ನು ಕೊಡುತ್ತಿದ್ದಾರೆ ?

The Hon'ble Sri H. C. DASAPPA.—Is that a question ? The Budget shows everything. All these questions are answered ; how much we are spending on measures of welfare and so on.

ಶ್ರೀ ಟಿ. ಮಾದಯ್ಯಗೌಡರು.—ಒಟ್ಟು ನಮಗೆಷ್ಟು ವರಮಾನ ಬರುತ್ತಿದೆಯೆಂದು ನೋಡಬೇಕಾದರೆ ಇದೆಲ್ಲಾ ಖರ್ಚು ಕಳೆದು ಬರುತ್ತಿದೆಯೇ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ನಾನು ಕೇಳುತ್ತಿದ್ದೇನೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದೆಲ್ಲಾ ಬಡ್ಜೆಟ್ಟಿನಲ್ಲಿ ಹೇಳಿದೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—1949-50ರಲ್ಲಿ 5 ಲಕ್ಷ ರೂಪಾಯಿಗಳ ವರ ಮಾನ ಬಂದಿದೆಯೆಂದು ಹೇಳಿದ್ದೀರಿ. ಇಷ್ಟು ಕಡಿಮೆ ಯಾದುದು ಉತ್ಪತ್ತಿ ಕಡಿಮೆಯಾದುದರಿಂದಲೇ ಅಥವಾ ಬೆಲೆ ಕಡಿಮೆಯಾದುದರಿಂದಲೇ ?

ಅಧ್ಯಕ್ಷರು.—ಉತ್ತರ ಹೇಳಿದ್ದಾರೆ.

ಶ್ರೀ ಎಸ್. ರಂಗರಾಮಯ್ಯನವರು.—1950-51 ರಲ್ಲಿ ಎಷ್ಟು ಹಣ ಬಂದಿದೆಯೆಂಬುದನ್ನು ಹೇಳು ತ್ತೀರಾ ?

The Hon'ble Sri H. C. DASAPPA.—It is given in the Budget. It will be about Rs. 11 lakhs or Rs. 12 lakhs.

ಶ್ರೀ ಎಸ್. ರಂಗರಾಮಯ್ಯನವರು.—ಇದರಲ್ಲಿ ಪ್ರತಿನಿತ್ಯವೂ ಎಷ್ಟು ಬೀಡು ಕಬ್ಬಿಣ ತಯಾರಾಗ ಬೇಕೆಂದು ಸಂಕಲ್ಪಮಾಡಲಾಗಿದೆ !

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—70ರಿಂದ 80 ಟನ್‌ಗಳವರೆಗೆ.

ಶ್ರೀ ಎಸ್. ರಂಗರಾಮಯ್ಯನವರು.— ಉಕ್ಕೋ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇದೂ ಸಹ ಸ್ವಲ್ಪ ಹೆಚ್ಚು ಕಡಿಮೆ ಆಶ್ಚೇ ಇರಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ಪ್ರತಿನಿತ್ಯವೂ ಈಗ ತಾವು ತಿಳಿಸಿದಷ್ಟು ಉತ್ಪತ್ತಿ ಆಗುತ್ತಿದೆಯೇ ?

The Hon'ble Sri H. C. DASAPPA.—Yes ; of course, the blast furnace may produce just a few tons less. As you will see, this is an answer about the whole production.

ಶ್ರೀ ಎಸ್. ರಂಗರಾಮಯ್ಯನವರು.—ಆ ಕಾಮನ್ ಪೂಲಿನಲ್ಲಿ ನಮ್ಮ ಮೈಸೂರು ಸಂಸ್ಥಾನಕ್ಕೆ ಎಷ್ಟು ಬೇಕೋ ಅಷ್ಟು ಉಕ್ಕು ಮತ್ತು ಕಬ್ಬಿಣವನ್ನು ಒದಗಿಸಲಿಕ್ಕೆ ಏನು ಏರ್ಪಾಡು ಮಾಡಿದ್ದೀರಿ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಪ್ರಶ್ನೋತ್ತರದ VIIನೇ ಭಾಗದ 4ನೆಯ ಪುಟದಲ್ಲಿ ಎಲ್ಲವನ್ನೂ ಕೊಡಲಾಗಿದೆ. ದಯವಿಟ್ಟು ನೋಡಿ. All the figures are there.

ಶ್ರೀ ಎಸ್. ರಂಗರಾಮಯ್ಯನವರು.—ಆ 'ಕಾಮನ್ ಪೂಲಿನಿಂದ' ಕೊಡತಕ್ಕದ್ದನ್ನು ಒದಗಿಸಲು ತಾವು ಏನು ಏರ್ಪಾಡು ಮಾಡಿದ್ದೀರಿ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಬೇಕಾದಷ್ಟು ಏರ್ಪಾಡಗಳನ್ನು ಸದಾ ಮಾಡುತ್ತಲೇ ಇದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಅವರು ಇನ್ನೂ ಹೆಚ್ಚು ಕೋಟಾ ಕೊಡಲು ತಾವೇನಾದರೂ ಏರ್ಪಾಡು ಮಾಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಮಾಡುತ್ತಲೇ ಇದ್ದೇವೆ. ಮೊದಲು 450 ಟಿಕೆಗಳನ್ನು ಕೊಡುತ್ತಿದ್ದರು. ಈಗ ಅದನ್ನು 600 ಚಿಲ್ಲರೆ ಟಿಕೆಗೆ ಹೆಚ್ಚಿಸಿದೆ. I am speaking of only industrial quota, ಇದಲ್ಲದೇನೆ ತಿಂಗಳೊಂದಕ್ಕೆ 1,500 ಟಿಕೆಗಳನ್ನು ಸ್ಪೆಷರ್ ಆಗಿ ಕೊಡುತ್ತಿದ್ದಾರೆ. ಜಿ. ಎಂ. ಎಫ್. ಗೆ ಸುಮಾರು 3,006 ಟಿಕೆಗಳನ್ನೂ, ಇತರ ಬಾಬಿಗೆ 3,004 ಟಿಕೆಗಳನ್ನೂ, ಹೀಗೆ ಅವರ ನಮಗೆ ಎಷ್ಟು ಬೇಕೋ ಅಷ್ಟನ್ನೂ ಕೊಟ್ಟಿದ್ದಾರೆ. ಕೈಗಾರಿಕೆಗಳಿಗಾಗಿ ಇನ್ನೂ ಹೆಚ್ಚಿನ ಕೋಟ ಕೊಟ್ಟಿದ್ದಾರೆ. ಇಷ್ಟಾಗಿದ್ದರೂ ನಾವು ಇನ್ನೂ ಹೆಚ್ಚಾಗಿ ಕೊಡಬೇಕೆಂದು ಕೇಳುತ್ತಲೇ ಇದ್ದೇವೆ. ಆದರೆ ಇಷ್ಟೆಲ್ಲ ಅಲ್ಲದೆ ಟಿಕ್ಸ್ ಟ್ವೆಲ್‌ಮಿಲ್ಸ್, ಎಲೆಕ್ಟ್ರಿಕಲ್ ಮತ್ತು ಸ್ಟೀಲ್ ಕಟ್ಟಿಗೆ ಆಲಾಯಿದೆ ಕೊಡುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ನಮ್ಮ ಸಂಸ್ಥಾನದ ಅವಶ್ಯಕತೆ ಎಷ್ಟು ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಈ ವಿಷಯ ಅನೇಕ ವಿಚಾರಗಳನ್ನು ಅನುಸರಿಸಿ ಹೋಗತಕ್ಕದಾಗಿದೆ. ಕಟ್ಟಡಗಳು ಇತ್ಯಾದಿಗಳ ಮೇಲೆ ಹೋಗುತ್ತದೆ. ನಿರ್ದಿಷ್ಟವಾಗಿ ತಿಳಿಸಲು ಈಗ ಸಾಧ್ಯವಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ತಾವು ನಮ್ಮ ಸಂಸ್ಥಾನದ ಆವಶ್ಯಕತೆಗೆ ಸಾಕಾಗುವಷ್ಟನ್ನು ಒದಗಿಸಲು ಏನು ಏರ್ಪಾಡು ಮಾಡಿದ್ದೀರಿ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇದನ್ನು ಪೂಲಿನವರೆ per capita basis ಮೇಲೆ ನಿಗದಿ ಮಾಡಿದ್ದಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ಕಾಮನ್ ಪೂಲಿನವರು ನಿರ್ಧರಿಸಿರುವ ಬೆಲೆಗಿಂತ ನಮ್ಮ ಕಬ್ಬಿಣ ಮತ್ತು ಉಕ್ಕಿಗೆ ಅವರು ಕೊಡುತ್ತಿರುವ ಬೆಲೆ ಕಮ್ಮಿಯೋ ಅಥವಾ ಹೆಚ್ಚೋ ?

ಅಧ್ಯಕ್ಷರು.—ಈ ಪ್ರಶ್ನೆಗೆ ಆಗಲೇ ಉತ್ತರ ತಿಳಿಸಿದ್ದಾರೆ. ಸುಮಾರು ಒಂದುನೂರು ರೂಪಾಯಿಗಳನ್ನು ಹೆಚ್ಚಾಗಿ ಕೊಡುತ್ತಿದ್ದಾರೆ ಎಂದು ಹೇಳಿದ್ದಾರೆ.

Mr. SPEAKER.—Next question No. 71. Sri T. Hanumiah.

Date Grove Lands for Cultivation in Districts where Prohibition has been introduced.

*ಪ್ರಶ್ನೆ.—71 ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಡಿಸ್ಟ್ರಿಕ್ಟ್—ನಿಮ್ಸ್ ತರಗತಿಗಳ ಪರವಾಗಿ).—ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ :—

(a) ಪಾನನಿರೋಧವು ಆಚರಣೆಗೆ ಬಂದಿರತಕ್ಕ ಡಿಸ್ಟ್ರಿಕ್ಟ್‌ಗಳು ಯಾವುವು ;

(b) ಮೇಲಿನ ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲಿಯೂ ಇರತಕ್ಕ ಈಚಲು ವನಗಳ ಎಕರೆಗಳೆಷ್ಟು ?

(c) ಆ ಪ್ರತಿಕ ಸಾಗುವಳಿಗೆ ಎಷ್ಟು ಎಕರೆಗಳನ್ನು ವಿಲೇವಾರಿಮಾಡಲಾಗಿದೆ ; (ವಿವರಗಳನ್ನು ಡಿಸ್ಟ್ರಿಕ್ಟ್‌ವಾರಾಗಿ ತಿಳಿಸಬೇಕೆಂದು ಪ್ರಾರ್ಥನೆ)

(d) ಉಳಿದಿರತಕ್ಕ ಜಮೀನನ್ನು ಸಾಗುವಳಿಗೆ ಕೊಡದಿರುವುದಕ್ಕೆ ಕಾರಣವೇನು ? (ಡಿಸ್ಟ್ರಿಕ್ಟ್‌ವಾರಾಗಿ ತಿಳಿಸಬೇಕೆಂದು ಪ್ರಾರ್ಥನೆ.)

ಉತ್ತರ.—ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಮತ್ತು ಎಕ್ಸೈಜ್ ಶಾಖೆಗಳ ಸಚಿವರು).—

(a) 1 ಕೋಲಾರ
2 ತುಮಕೂರು
3 ಚಿತ್ರದುರ್ಗ
4 ಚಿಕ್ಕಮಗಳೂರು ಮತ್ತು
5 ಶಿವಮೊಗ್ಗ

		ಎಕರೆಗಳು	ಗುಂ.
(b) 1 ಕೋಲಾರ	...	21,605	37
2 ತುಮಕೂರು	...	66,395	23
3 ಚಿತ್ರದುರ್ಗ	...	55,771	30
4 ಚಿಕ್ಕಮಗಳೂರು		25,436	26
5 ಶಿವಮೊಗ್ಗ	...	4,256	36

(c) ಈ ಕೆಳಗೆ ಕಂಡ ವಿಸ್ತೀರ್ಣದಷ್ಟು ಜಮೀನನ್ನು ಸಾಗುವಳಿಗೆ ವಿಲೇವಾರಿಮಾಡುವಂತೆ ಹುಕುಂಗಳನ್ನು ಸಾದರುಮಾಡಲಾಗಿದೆ.—

ಚಿತ್ರದುರ್ಗ	...	22,192	27
ತುಮಕೂರು	...	6,588	10
ಕೋಲಾರ	...	4,804	24
ಶಿವಮೊಗ್ಗ	...	2,883	34

(d) ಮೇಲೆ ತಿಳಿಸಿರತಕ್ಕ ಕೋಲಾರ, ತುವಕೂರು, ಚಿತ್ರದುರ್ಗ ಮತ್ತು ಶಿವಮೊಗ್ಗ—ಈ ನಾಲ್ಕು ಡಿಸ್ಟ್ರಿಕ್ಟ್‌ಗಳಲ್ಲಿ ಸಾಗುವಳಿಗೆ ಕೊಡದೆ ಉಳಿದಿರತಕ್ಕ ಜಮೀನುಗಳಲ್ಲಿ ರಾಥದಾಯಕವಾದ, ಒತ್ತೊತ್ತಾದ ಈಚಲು ವನಗಳಿರುವುದರಿಂದಲೂ, ಅಥವಾ ಆ ಜಮೀನುಗಳಲ್ಲಿ ಕಟ್ಟೆಗಳು, ಸ್ಮಶಾನಗಳು, ನಾಲೆಗಳು—ಇವೇ ಮೊದಲಾದುವುಗಳಿರುವುದರಿಂದ, ಸಾಗುವಳಿಗೆ ಯೋಗ್ಯವಾಗಿಲ್ಲದಿರುವುದರಿಂದಲೂ ಈ ಜಮೀನುಗಳನ್ನು ಇಲಾಖೆಗೇ ಉಳಿಸಿಕೊಳ್ಳಲಾಗಿದೆ.

ಚಿಕ್ಕಮಗಳೂರು \ ಡಿಸ್ಟ್ರಿಕ್ಟ್‌ನಲ್ಲಿರುವ ಜಮೀನುಗಳನ್ನು ಸಾಗುವಳಿಗೆ ಬಿಟ್ಟುಕೊಡುವ ವಿಷಯವಾಗಿ ಸಲಹೆಗಳು ಇನ್ನೂ ಸರ್ಕಾರಕ್ಕೆ ಬಂದಿಲ್ಲ.

ಶ್ರೀ ಟಿ. ಹನುಮಯ್ಯನವರು.—ಈಗ ಪಾನನಿರೋಧ ಜಾರಿಗೆ ತಂದಿರತಕ್ಕ 5 ಜಿಲ್ಲೆಗಳನ್ನು ಬಿಟ್ಟರೆ ಮತ್ತೆ ಹೊಸದಾಗಿ ಯಾವ ಜಿಲ್ಲೆಯಲ್ಲಾಗಲಿ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಸರ್ಕಾರದವರು ಆಲೋಚಿಸಿದ್ದಾರೆಯೇ ?